# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - WEDNESDAY 8-6-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಭಾರತದ ಮೇ ತಿಂಗಳ ಪಾಮೆಣ್ಣೆ ಖರೀದಿ, 7 ತಿಂಗಳ ಗರಿಷ್ಠ ಮಟ್ಟಕ್ಕೆ

ಇಂಡೋನೇಶಿಯಾದ ರಫ್ತು ನಿರ್ಬಂಧ ಹೊರತಾಗಿಯೂ ಭಾರತದ ಮೇ 2022, ತಿಂಗಳ ಪಾಮೆಣ್ಣೆ ಆಮದು ಹಿಂದಿನ 7 ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ. ಮೇ ತಿಂಗಳ ಆಮದು 660,000 ಟನ್‌ಗಳಾಗಿದ್ದು, ಎಪ್ರಿಲ್ ತಿಂಗಳಲ್ಲಿ 572,508 ಟನ್‌ಗಳಾಗಿತ್ತು. ಮೇ ತಿಂಗಳ ಸೋಯಾ ಎಣ್ಣೆ ಆಮದು 352,614 ಟನ್‌ಗಳಾಗಿದ್ದು, ಎಪ್ರಿಲ್‌ನಲ್ಲಿ ಇದು 315,853 ಟನ್‌ಗಳಾಗಿತ್ತು. ಹಾಗೇಯೇ ಸೂರ್ಯಕಾಂತಿ ಎಣ್ಣೆ ಆಮದು ಎಪ್ರಿಲ್ ತಿಂಗಳ 67,788 ಟನ್‌ಗಳಿಂದ 123,970 ಟನ್‌ಳಿಗೆ ನೆಗೆತವಾಗಿದೆ.

## 10 ಲಕ್ಷ ಟನ್ ಸಕ್ಕರೆ ರಫ್ತಿಗೆ ಸರಕಾರದಿಂದ ಸಮ್ಮತಿ

ರಫ್ತು ನಿರ್ಬಂಧದ ನಂತರ ಸರಕಾರ ಮಿಲ್‌ಗಳಿಂದ ಬಂದ ಅರ್ಜಿಗಳನ್ನು ಪರಿಶೀಲಿಸಿ 10 ಲಕ್ಷ ಟನ್ ಸಕ್ಕರೆ ರಫ್ತು ಮಾಡಲು ಸಮ್ಮತಿಸಿದೆಯೆನ್ನಲಾಗಿದೆ. ಇದುವರೆಗೆ ಭಾರತದಿಂದ 8.5 ಮಿ.ಟನ್ ಸಕ್ಕರೆ ರಫ್ತಾಗಿದೆಯೆನ್ನಲಾಗಿದ್ದು, ಮುಂದಿನ ಅಕ್ಟೋಬರ್ ತನಕ ಇನ್ನೂ 1.5 ಮಿ.ಟನ್ ಸಕ್ಕರೆ ರಫ್ತಾಗಬಹುದೆನ್ನಲಾಗಿದೆ.